ಗದ್ಯಾಳ ಕೆರೆಯಂ ಹೂಳಂ ತೆಗೆಸಂವ ವಿಚಾರ

೧೭೭. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬಿಳಗಿ),---ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಗದ್ಯಾಳ ಗ್ರಾಮದ ಹತ್ತಿರ ಬ್ರಿಟಿಷರು ನಿರ್ಮಿಸಿದ ನೀರಾವರಿ ಕೆರೆ ಇರುವುದಂ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ವಿಶಾಲವಾದ ಹಳೆಯ ಕೆರೆಯಲ್ಲಿರುವ ಹೂಳು ತೆಗೆಯುವುದು ಈ ಬರಗಾಲದ ಸಮಯದಲ್ಲಿ ಕಾರ್ಯಕ್ರಮವೇನಾದರೂ ಸರ್ಕಾರದವರು ಕೈಗೊಂಡಿದ್ದಾರೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).--

ಅ) ಹೌದು.

ಆ) ಇಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.-- ನಾನು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಒಂದೆರಡು ಮಾತುಗಳನ್ನು ಇದರ ಬಗ್ಗೆ ವಿನಂತಿಸಿಕೊಳ್ಳುತ್ತೇನೆ. ಇದು ನಮ್ಮ ತಾಲ್ಲೂಕಿನ ಅತ್ಯಂತ ದೊಡ್ಡದಾದ ಕೆರೆಯಾಗಿದೆ. ಬ್ರಿಟಿಷ್ ಸರ್ಕಾರದವರು ಇದರ ಕಾರಿತು ಕಟ್ಟಿನಲ್ಲಿ ಕೆತ್ತಿದ್ದಾರೆ. ಬರಗಾಲ ಪರಿಹಾರ ಸಮಿತಿಯ ಸಭೆಯಲ್ಲಿ ನಮ್ಮ ಅಧಿಕಾರಿಗಳು ಏನು ಹೇಳುತ್ತಾರೆ ಅಂದರೆ, ಸಣ ಸಣ್ಣ ಕೆಲಸದಿಂದ ಏನೂ ಪ್ರಯೋಜನ ಇಲ್ಲ, ನನ್ನ ಕ್ಷೇತ್ರವಾದ ಸಾವಳಗಿಯು ಅತ್ಯಂತ ಆಭಾವ ಪೀಡಿತ ಪ್ರದೇಶ. ಆದುದರಿಂದ ಈ ಕ್ಷೇತ್ರದಲ್ಲಿ ಸಣ್ಣ ಸಣ್ಣ ಕೆಲಸಗಳನ್ನು ಪ್ರಾರಂಭ ಮಾಡಿದರೆ ಆದರಿಂದ ಏನೂ ಪ್ರಯೋಜನವಿಲ್ಲ. ಮೇಜರ್ ವರ್ಕ್ಸ್ ತೆಗೆದುಕೊಳ್ಳಿ ಎಂದು ಅಧಿಕಾರಿಗಳೇ ಹೇಳುತ್ತಾರೆ. ಈ ಕೆರೆಯು ಹಲವಾರು ಹಳ್ಳಿಗಳಿಗೆ ಕೇಂದ್ರವಾಗಿದೆ. ಈ ಕೆಲಸವನ್ನು ತಾವು ಕೈಗೆತ್ತಿಕೊಂಡರೆ ಬಹಳ ಉಪಯೋಗವಾಗುತ್ತದೆ. ನೀರಾವರಿ ಅಭಿವೃದ್ಧಿಯೂ ಆಗುತ್ತದೆ. ಸುತ್ತಮುತ್ತಲೂ ಸಾವಿರಾರು ಹಳ್ಳಿಗಳಿಗೆ ಅಂತರ್ಜಲವನ್ನು ಒದಗಿಸಿದ ಹಾಗಾಗುತ್ತದೆ. ಇಂತಹ ಸಮಯದಲ್ಲಿ ಅಭಾವ ಪರಿಹಾರ ಕಾಮಗಾರಿಯಲ್ಲಿ ಈ ಕೆಲಸವನ್ನು ತೆಗೆದುಕೊಂಡರೆ ಸುಮಾರು ೭ ಸಾವಿರ ಜನರಿಗೆ ೨-೩ ತಿಂಗಳ ಕಾಲ ಉದ್ಯೋಗ ಸಿಗುತ್ತದೆ. ಇದರ ಬಗ್ಗೆ ತಾವುಗಳು ತೀವ್ರವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಮಂತ್ರಿ ಈ ದಿಶೆಯಲ್ಲಿ ಅಧಿಕಾರಿಗಳಿಗೆ ಆದೇಶವನ್ನು ನೀಡಬೇಕು ಈ ಕೆರೆಯ ಹೂಳು ತೆಗೆಸಂವ ಕಾರ್ಯವನ್ನು ಮಾಡ ಬೇಕೆಂದು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.-- ನಾನು ಮೊದಲೇ ಹೇಳಿದ್ದೇನೆ. ಈ ಕೆರೆಯಂ ಬ್ರಿಟಿಷರ ಕಾಲ ದಲ್ಲಿ ಕಟ್ಟಿದ್ದು ಹೌದು ಎಂದು, ಇದರ ಹಿಂದುಗಡೆ ೫೬ ಹೆಕ್ಟೇರ್ ಭೂಮಿಯಂ ಇದ್ದುದು ನನಗೆ ಗೊತ್ತಿದೆ ಕೆರೆಯಲ್ಲಿ ಮಣ್ಣು ಬಿದ್ದು, ಹೂಳು ತುಂಬಿಕೊಂಡಿರುವ ಕಾರಣ ಹೂಳು ಎತ್ತುವ ಕೆಲಸವನ್ನು ಮಾಡು ತ್ತೀರಾ ಎಂದು ಕೇಳಿದ್ದಾರೆ. ಅದರ ಬಗ್ಗೆ ಸರಕಾರ ಇಲ್ಲ ಎಂದು ಹೇಳಿದೆ. ಮೊನ್ನೆ ತಾನೆ ಸನ್ಮಾನ್ಯ ಸದಸ್ಯರು ಮುಖ್ಯಮಂತ್ರಿಗಳ ಕೊಠಡಿಯಲ್ಲಿ ಚರ್ಚೆ ಮಾಡಿದಾಗ ಈ ಕೆರೆಯ ಪ್ರಸ್ತಾಪ ಮಾಡಿದೆ. ಇದರ ಜೊತೆಗೆ ಇನ್ನೂ ೩-೪ ಕೆರೆಗಳ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಬರಗಾಲ ಪರಿಹಾರ ಕಾಮಗಾರಿಯಲ್ಲಿ ಕೆರೆಯ ಹೂಳು ಎತ್ತುವ ಕೆಲಸವನ್ನು ಮಾಡಿ ಎಂದು, ಅದಕ್ಕೆ ಇಟ್ಟಿರುವ ಹಣವನ್ನು ಇದಕ್ಕೆ ವಿನಿಯೋಗ ಮಾಡಿ ಎಂದು ಹೇಳಿದ ತಮ್ಮ ಸಲಹೆಯನ್ನು ಅಂಗೀಕಾರ ಮಾಡಿದ್ದೇವೆ. ಆದುದರಿಂದ ಈ ಕೆರೆಯ ಹೂಳು ಎತ್ತುವ ಕೆಲಸ ಮಾಡಲಿಕ್ಕೆ ಬರಗಾಲದ ಹಣವನ್ನು ಉಪಯೋಗ ಮಾಡುತ್ತೇವೆ.

ಉಪಾಧ್ಯಕ್ಷರು.-- ಶ್ರೀ ಟಿ. ಎಸ್. ಮಣಿಯವರು (ಗೈರುಹಾಜರಿ)

ಪ್ರಶ್ನೋತ್ತರ ವೇಳೆ ಮುಗಿಯಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).-- ಪಟ್ಟಿ ಯನ್ನು ಸಭೆಯ ಮುಂದಿಟ್ಟಿದ್ದೇನೆ.

ಉಪಾಧ್ಯಕ್ಷರು.— ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ಬಂಟ್ವಾಳ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಕರಯೋಜನೆ

೨೧೫. ಶ್ರೀ ಬಿ. ಎ. ಉಮಂರಬ್ಬ (ವಿಟ್ಲ).— ಮಾನ್ಯ ಅರಣ್ಯ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಂವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಂ ಬಂಟ್ವಾಳ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಸರ್ಕಾರದವರಂ ಮಾಡಿದ ಹಣವೆಷ್ಟು ?

ಆ) ಈ ಕಾರ್ಯಕ್ರಮದ ಪ್ರಕಾರ ಬಂಟ್ವಾಳ ತಾಲ್ಲೂಕಿನಲ್ಲಿ ಗ್ರಾಮವಾರು ನೆಡಲಾದ ಸಸಿಗಳೆಷ್ಟು ?

ಶ್ರೀ ಬಿ. ಎ. ಜೀವಿಜಯರು (ರಾಜ್ಯ ಅರಣ್ಯ ವಂಂತ್ರಿಗಳು).—

ಅ) ಸಾಮಾಜಿಕ ಅರಣ್ಯ ಯೋಜನೆಯ ೧೯೮೩–೮೪ ರಿಂದ ಜಾರಿಗೆ ಬಂದಿದ್ದು. ಬಂಟ್ವಾಳ ತಾಲ್ಲೂಕಿನಲ್ಲಿ ೧೯೮೩–೮೪ ರಿಂದ ೧೯೮೫–೮೬ ಡಿಸಂಬರ್ ತಿಂಗಳವರೆಗೆ ಆಗಿರುವ ಖರ್ಚಿನ ವಿವರ ರೀತಿ ಇದೆ.—

೧೯೮೩–೮೪	ರೂ. ೮೯೩೨೦–೦೦
೧೯೮೪–೮೫	ರೂ. ೯೭೫೭೧–೦೦
೧೯೮೫–೮೬	ರೂ. ೧೪೮೮೧–೦೦

ಆ) ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಬಂಟ್ವಾಳ ತಾಲ್ಲೂಕಿನಲ್ಲಿ ೧೯೮೩–೮೪ ರಿಂದ ೧೯೮೫–೮೬ ರವರೆಗೆ ಗ್ರಾಮವಾರು ನೆಟ್ಟ ಸಸಿಗಳ ವಿವರ.—

	ಗ್ರಾಮ	೧೯೮೩–೮೪ ಸಂಖ್ಯೆ	೧೯೮೪–೮೫ ಸಂಖ್ಯೆ	೧೯೮೫–೮೬ ಸಂಖ್ಯೆ
೧	ವೀರಕಂಬ	೪೪೨೦೦	೧೦೯೦೦	೧೨೫೦೦
೨	ಮಾಜಾಲ	೬೨೭೫	೧೨೫೦	೬೨೫
೩	ಕಲ್ಮಂಜ	೧೦೭೫	೨೧೫	೧೭೭
೪	ನೇರಳಕಟ್ಟೆ	೭೯೦	೧೫೮	೭೮
೫	ಇದ್ಕಿದು	೫೦೦	೩೨೦೦	೫೨೪೦
೬	ಬಾಳ್ಳೆಳ	—	೬೦೦೦	—
೭	ಪೆರಾಜೆ	—	—	೫೦೦೦
೮	ವಿಟ್ಲ	೨೨೫	೪೪೦೦	೭೦೦೦
೯	ಕರ್ವಾಡಿ	೨೫	—	೫೦೦೦
೧೦	ಅನಂತವಾಡಿ	೬೧೫೦	—	೨೧೨೦೦
೧೧	ಕನ್ಯಾವ	—	—	೪೪೦೦
೧೨	ಕೆ. ಪು.	—	೧೦೦೦	೬೦೦೦
೧೩	ಬೋಳಂತೂರು	—	—	೫೧೬೦
೧೪	ಕೊಲ್ನಾಡು	—	—	೮೧೨೮
೧೫	ವಂಚ	೧೫೦	—	೬೦೦೦
೧೬	ಅಳಿಕೆ	೯೦೫೦	—	೧೦೦೦
೧೭	ಕುಂಡ್ಯಾಮ	೩೦೦	೬೧೦೦	೧೦೦೦